# ವೇದೋಪನಿಷತ್ತುಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳು

ಸ್ವಾಮಿ ಕರುಣಾಕರಾನಂದ

ಅನಾದಿಯೂ ಸನಾತನವೂ ಆಗಿರುವ ವೇದಗಳು ಭಾರತೀಯ ಸಂಸ್ಕೃತಿಯ ಉಗಮಕೇಂದ್ರ. ಬಹುವಿಸ್ತಾರವಾದ ವೈದಿಕ ಸಾಹಿತ್ಯದಲ್ಲಿ ಲಭಿಸುವ ಸಾಂಸ್ಕೃತಿಕ ಅಂಶಗಳನ್ನು ಕುರಿತು ಬರೆದಿರುವ ಲೇಖಕರು ಸಂಸ್ಕೃತ ಹಾಗೂ ವೇದಾಂತ ಶಾಸ್ತ್ರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಅವರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರಾಗಿದ್ದು, ಅವರ ಅನೇಕ ಬರಹಗಳು 'ವಿವೇಕಪ್ರಭ'ದಲ್ಲಿ ಪ್ರಕಟವಾಗಿವೆ.

### ವೇದದ ಪರಿಚಯ

**ಮಾ**ನವನ ಅಭ್ಯುದಯ ಹಾಗೂ ನಿಃಶ್ರೇಯಸಗಳ ಸಾಧನ ಯಾವುದರಿಂದ ತಿಳಿದುಬರುತ್ತದೋ ಅದೇ 'ವೇದ'. ಅಭ್ಯುದಯವೆಂದರೆ ಈ ಪೃಥ್ವಿಯಲ್ಲಿ ಹಾಗೂ ಬೇರೆ ಲೋಕಗಳಲ್ಲಿ ಕೇವಲ ವೈಷಯಿಕ ಸಮೃದ್ಧಿಯಿಂದ ಸುಖವನ್ನು ಪಡೆಯುವುದಷ್ಟೇ ಅಲ್ಲದೆ ಧರ್ಮವನ್ನೂ ಜೊತೆಗೆ ಗಳಿಸುವುದು. ನಿಃಶ್ರೇಯಸವೆಂದರೆ ಮೋಕ್ಷ. ವೇದಗಳಲ್ಲಿನ ನಿಃಶ್ರೇಯಸವನ್ನು ಬೋಧಿಸುವ ಭಾಗಕ್ಕೆ ಉಪನಿಷತ್ತೆಂದು ಕರೆಯುತ್ತಾರೆ. ಅದು ವೇದಗಳ ಪರಮತಾತ್ಪರ್ಯವಾದ್ದರಿಂದ ಅದಕ್ಕೆ ವೇದಾಂತವೆಂಬ ಹೆಸರೂ ಇದೆ. ಒಬ್ಬ ಸನಾತನ ವೈದಿಕನಿಗೆ ವೇದವು ಧರ್ಮಕ್ಕೆ ಹಾಗೂ ಮೋಕ್ಷಕ್ಕೆ ದಾರಿದೀಪವಾಗುವ ಜ್ಞಾನರಾಶಿ. ಧರ್ಮದಿಂದ ಜೀವನಿಗೆ ಸಂಸ್ಕಾರವುಂಟಾಗಿ ಮೋಕ್ಷಕ್ಕೆ ಅರ್ಹನಾಗುತ್ತಾನೆ, ಉಪನಿಷತ್ತಿನ ತತ್ತ್ವಬೋಧನೆಯಿಂದ ಮುಕ್ತನಾಗುತ್ತಾನೆ. ಈಗೇನೋ ನಮಗೆ ವೇದಗಳು ಮುದ್ರಿತ ಗ್ರಂಥರೂಪದಲ್ಲಿ ಸಿಗುತ್ತಿವೆ. ಆದರೆ ವೇದಗಳನ್ನು ಗ್ರಂಥವನ್ನು ನೋಡಿ ಓದುತ್ತ ಕಲಿಯಬಾರದು. ಆಚಾರ್ಯನು ವೇದವನ್ನು ಮೊದಲು ಹೇಳುತ್ತಾನೆ. ನಂತರ ಶಿಷ್ಯನು ಅದನ್ನು ಅನುಕರಿಸಿ ಉಚ್ಚರಿಸುತ್ತಾನೆ. ಇದೇ ವೇದವನ್ನು ಕಲಿಯುವ ಸಾಂಪ್ರದಾಯಿಕ ಪದ್ಧತಿ. ಇದರಿಂದ ಶಿಷ್ಯನು ಎಲ್ಲೆಲ್ಲಿ ಉಚ್ಚಾರಣೆಯಲ್ಲಿ ತಪ್ಪುತ್ತಿದ್ದಾನೋ, ಆಚಾರ್ಯನು ಅವನನ್ನು ತಿದ್ದಲು ಅನುಕೂಲವಾಗುತ್ತದೆ ಮತ್ತು ಶಿಷ್ಯನು ಆಚಾರ್ಯನ ಉಚ್ಚಾರಣೆಯ ಮೇಲೆ ಗಮನವಿಟ್ಟು ಸರಿಯಾದ ಉಚ್ಚಾರಣೆಯನ್ನು ಕಲಿಯಲು ಅನುಕೂಲವಾಗುತ್ತದೆ.

ವೇದವನ್ನು ಶ್ರುತಿ, ಆಮ್ನಾಯ, ತ್ರಯೀ, ಬ್ರಹ್ಮ, ಆಗಮ, ಛಂದಸ್, ಎಂದೂ ಕರೆಯುತ್ತಾರೆ. ವೈದಿಕನು 'ವೇದವು ಯಾರಿಂದಲೂ ನಿರ್ಮಿಸಲ್ಪಟ್ಟಿಲ್ಲವೆಂದೂ ನಿತ್ಯವೆಂದೂ, ತಪೋಮಯರಾದವರ ಪವಿತ್ರ ಹೃದಯದಲ್ಲಿ ಕಂಡು ಬಂದಿರುವುದೆಂದೂ, ನಂತರ ಹಾಗೆ ಕಂಡುಕೊಂಡ 'ಋಷಿ' ಯು ಆ ಸತ್ಯವನ್ನು ತನ್ನ ಶಿಷ್ಯರಿಗೆ ಬೋಧಿಸುವುದರೊಂದಿಗೆ ಜಗತ್ತಿಗೆ ಪ್ರಕಾಶಪಡಿಸಿದನೆಂದೂ' ನಂಬುತ್ತಾನೆ. ಸಾಂಪ್ರದಾಯಿಕರು ವೇದವು 'ಮಂತ್ರ ಹಾಗೂ ಬ್ರಾಹ್ಮಣಗಳ ರೂಪ'ವಾಗಿದೆಯೆಂದು ಹೇಳುತ್ತಾರೆ. ವೇದದ ಮಂತ್ರಭಾಗದಲ್ಲಿ ವೈದಿಕ ಯಜ್ಞಯಾಗಗಳಲ್ಲಿ ಉಪಯೋಗಿಸುವ ಮಂತ್ರಗಳಿರುತ್ತವೆ. ಇವನ್ನು ಸಂಹಿತಾಭಾಗವೆಂದೂ ಕರೆಯುತ್ತಾರೆ. ಬ್ರಾಹ್ಮಣ ಭಾಗದಲ್ಲಿ ಆ ಮಂತ್ರಗಳನ್ನು ಹೇಗೆ ವಿನಿಯೋಗಿಸುವುದು, ಪ್ರತಿಯೊಂದು ಕರ್ಮವನ್ನು ಮಾಡುವ ವಿಧಾನ, ಅದಕ್ಕೆ ಸಂಬಂಧಿಸಿದ ಇತಿಹಾಸ, ಅನೇಕ ಆಖ್ಯಾಯಿಕೆಗಳು ಇರುತ್ತವೆ. ಇವುಗಳು ಸಂಹಿತಾಭಾಗದ ವ್ಯಾಖ್ಯಾನದಂತಿರುತ್ತವೆ. ಅರಣ್ಯದಲ್ಲಿ ರಹಸ್ಯದಲ್ಲಿ ಉಪದೇಶಿಸಲ್ಪಡುವ ವೇದ ಭಾಗ ಗಳಿಗೆ ಆರಣ್ಯಕಗಳೆನ್ನುತ್ತಾರೆ. ಇವುಗಳಲ್ಲಿ ಸಾಮಾನ್ಯವಾಗಿ ಉಪಾಸನೆ ಹಾಗೂ ಆತ್ಮವಿಚಾರಗಳು ಬರುತ್ತವೆ. ವೇದದ ಯಾವ ಭಾಗದಲ್ಲಿ ಆತ್ಮದ ವಿಚಾರ, ಬ್ರಹ್ಮದ ವಿಚಾರ, ಮುಕ್ತಿಯ ವಿಚಾರ ಇವುಗಳು ಇರುವವೋ ಅವುಗಳು ಮಂತ್ರಗಳ ಶೈಲಿ ಯಲ್ಲೇ ಇರಲಿ, ಬ್ರಾಹ್ಮಣಗಳ ಶೈಲಿಯಲ್ಲೇ ಇರಲಿ, ಆರಣ್ಯಕ ಭಾಗದಲ್ಲೇ ಇರಲಿ ಅವುಗಳನ್ನು ಉಪನಿಷತ್ತೆಂದು ಪರಿಗಣಿಸಿ ಪ್ರತ್ಯೇಕಿಸಲಾಗಿದೆ. ವೇದಗಳ ಒಂದೊಂದು ಶಾಖೆಗೂ ಕನಿಷ್ಟ ಒಂದೊಂದು ಉಪನಿಷತ್ತು ಇರುತ್ತದೆ. ವೇದಗಳು ಋಗ್, ಯಜುಸ್, ಸಾಮ, ಅಥರ್ವಗಳೆಂದು ನಾಲ್ಕೇ ಆದರೂ ಒಂದೊಂದು ವೇದದಲ್ಲಿಯೂ



ಅನೇಕ ಶಾಖೆಗಳಿರುತ್ತವೆ. ಪತಂಜಲಿಯು ತನ್ನ 'ಮಹಾಭಾಷ್ಯ' (ಪಾಣಿನಿಯು ರಚಿಸಿದ ಅಷ್ಟಾಧ್ಯಾಯೀ ಎಂಬ ವ್ಯಾಕರಣ ಗ್ರಂಥದ ಭಾಷ್ಯ)ದಲ್ಲಿ ಋಗ್ವೇದದಲ್ಲಿ ೨೧ ಶಾಖೆ ಗಳೂ, ಯಜುರ್ವೇದದಲ್ಲಿ ೧೦೧ ಶಾಖೆಗಳೂ, ಸಾಮವೇದ ದಲ್ಲಿ ೧೦೦೦ ಶಾಖೆಗಳೂ ಹಾಗೂ ಅಥರ್ವವೇದದಲ್ಲಿ೯ ಶಾಖೆಗಳೂ ಇದ್ದವೆಂಬುದಾಗಿ ಹೇಳುತ್ತಾನೆ. 'ಚರಣವ್ಯೂಹ' ವೆಂಬ ಗ್ರಂಥದಲ್ಲಿ ಶೌನಕರು ಈ ಎಲ್ಲ ಶಾಖೆಗಳ ನಾಮಗಳನ್ನೂ ಹೆಸರಿಸಿದ್ದಾರೆ. ಈ ಎಲ್ಲ ಶಾಖೆಗಳಲ್ಲಿ ಸ್ವಲ್ಪಮಟ್ಟಿಗೆ ಗ್ರಂಥಭಾಗ ದಲ್ಲಿ ಅಲ್ಲಲ್ಲಿ ವ್ಯತ್ಯಾಸವುಂಟು. ಅವುಗಳನ್ನು ಉಚ್ಚರಿಸುವ ಶೈಲಿಯಲ್ಲಿಯೂ ಭೇದವಿದೆ. ವೇದಗಳನ್ನು ಸ್ಮರಣೆಯಲ್ಲಿಡಲು, ತಪ್ಪಿಲ್ಲದೆ ಅವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿ ಸಲು ವೇದಗಳನ್ನು ಪದಪಾಠ, ಕ್ರಮಪಾಠಗಳನ್ನಾಗಿಯೂ, ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ, ಘನ ಎಂಬ ಎಂಟು ವಿಕೃತಿ ಪಾಠಗಳನ್ನಾಗಿಯೂ ಮಾಡಿಕೊಂಡು ಅಧ್ಯಯನ ಮಾಡುವ ಪದ್ಧತಿಯಿತ್ತು. ಅದು ಇಂದಿಗೂ ನಡೆದುಕೊಂಡು ಬರುತ್ತಿದೆ. ಇಂತಹ ಅಧ್ಯಯನವು ಅಸಾಧಾ ರಣ ಸ್ಮರಣಶಕ್ತಿಯನ್ನು ವಿದ್ಯಾರ್ಥಿಗೆ ನೀಡುತ್ತದೆ. ಋಗ್ವೇದದ ಮಂತ್ರಗಳಿಗೇ ಸ್ತೋಭಾಕ್ಷರ (ಓ, ಆಯೀ, ಹಾಊ ಇತ್ಯಾದಿ ನಿರರ್ಥಕ ಅಕ್ಷರ ಸಮೂಹ) ಗಳನ್ನು ಸೇರಿಸಿ ವೈದಿಕ ಕರ್ಮಗಳಲ್ಲಿ ಹಾಡುವ ವೇದಭಾಗಕ್ಕೆ ಸಾಮವೆಂದು ಹೆಸರು.

ವೇದಗಳನ್ನು ಅಧ್ಯಯನ ಮಾಡಿ ಅವುಗಳ ಅರ್ಥವನ್ನು ಹೊರತೆಗೆಯಬೇಕಾದರೆ ವಿದ್ಯಾರ್ಥಿಯು ಆರು ವೇದಾಂಗ ಗಳನ್ನೂ ಅಧ್ಯಯನ ಮಾಡಿರಬೇಕಾಗುತ್ತದೆ. ಶಿಕ್ಷಾ, ಛಂದಸ್, ವ್ಯಾಕರಣ, ನಿರುಕ್ತ, ಜ್ಯೋತಿಷ ಹಾಗೂ ಕಲ್ಪ — ಇವೇ ವೇದಾಂಗಗಳು. ವೇದಗಳನ್ನು ಉಚ್ಚರಿಸಬೇಕಾದರೆ ವರ್ಣ, ಸ್ವರ, ಮಾತ್ರಾ, ಬಲ, ಸಂಹಿತಾ ಅಥವಾ ಸಂಧಿ ಇವುಗಳ ಪರಿ ಜ್ಞಾನ ಬೇಕು. ಶಿಕ್ಷಾ ಅವುಗಳನ್ನು ತಿಳಿಸಿಕೊಡುತ್ತದೆ. ವೇದದಲ್ಲಿ ಇರುವ ಮಂತ್ರಗಳು ಯಾವ ಛಂದಸ್ಸಿನಲ್ಲಿವೆಯೆಂದು ತಿಳಿದಿರ ಬೇಕು. ಕೆಲವು ಮಂತ್ರಗಳನ್ನು ಊಹೆ ಮಾಡಬೇಕಾಗುತ್ತದೆ. ವೇದವು ಕೇವಲ ಸೂಚನೆಯನ್ನಷ್ಟೆ ನೀಡಿರುತ್ತದೆ. ಹಾಗೆ ಮಂತ್ರ ಗಳನ್ನು ಊಹಿಸುವುದಕ್ಕೆ ವ್ಯಾಕರಣದ ಜ್ಞಾನವಿರಬೇಕು. ವೇದ ದಲ್ಲಿ ಬರುವ ಅನೇಕ ಸಂದಿಗ್ಧ ಶಬ್ದಗಳ ಅರ್ಥವನ್ನು ತಿಳಿಸುವುದೇ ಯಾಸ್ಕರು ರಚಿಸಿದ ನಿರುಕ್ತವೆಂಬ ಕೋಶ. ವೈದಿಕ ಕರ್ಮಗಳನ್ನು ಮಾಡುವ ಸೂಕ್ತ ಕಾಲದ ಜ್ಞಾನವನ್ನು ನೀಡುವುದೇ ಜ್ಯೋತಿಷ. ಕಲ್ಪದಲ್ಲಿ ಶುಲ್ಬ ಸೂತ್ರ, ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮ ಸೂತ್ರಗಳೆಂದು ನಾಲ್ಕು ಬಗೆಯ ಗ್ರಂಥಗಳಿರುತ್ತವೆ. ಅನೇಕ ಋಷಿಗಳು ಇವನ್ನು ರಚಿಸಿರುತ್ತಾರೆ. ಆದ್ದರಿಂದ ಅವರವರ ಹೆಸರಿನಿಂದಲೇ ಅವು ಪ್ರಖ್ಯಾತವಾಗಿವೆ. ಶ್ರೌತಸೂತ್ರದಲ್ಲಿ ಯಜ್ಞ ಯಾಗಾದಿಗಳನ್ನು ಮಾಡುವ ವಿಧಾನ, ಅಲ್ಲಿ ಉಪಯುಕ್ತ ವಾಗುವ ಮಂತ್ರಗಳ ವಿವರಣೆಯಿರುತ್ತವೆ. ಗೃಹ್ಯಸೂತ್ರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ದ್ವಿಜರಿಂದ ಆಚರಿಸಬೇಕಾದ ಜಾತಕರ್ಮಾದಿ ಷೋಡಶ ಸಂಸ್ಕಾರಗಳ ವಿಧಿನಿಯಮಗಳನ್ನು ವಿವರಿಸಲಾಗಿದೆ. ಧರ್ಮಸೂತ್ರದಲ್ಲಿ ಸಾಮಾನ್ಯ ಜನರು ಆಚರಿಸ ಬೇಕಾದ ಧರ್ಮನಿಯಮಗಳನ್ನು ವಿವರಿಸಿದೆ. ಶುಲ್ಬಸೂತ್ರದಲ್ಲಿ ಯಜ್ಞದಲ್ಲಿ ಉಪಯುಕ್ತವಾದ ಅಗ್ನಿಕುಂಡ, ವೇದಿಕೆ, ಯಜ್ಞ ಸಾಮಗ್ರಿಗಳು ಮುಂತಾದವುಗಳನ್ನು ರಚಿಸುವ ಕ್ರಮ, ಅವುಗಳ ಪ್ರಮಾಣ ಮುಂತಾದ ವಿಷಯಗಳನ್ನು ವಿವರಿಸಿದೆ. ವೈದಿಕರಿಗಿದ್ದ ರೇಖಾಗಣಿತದ ಜ್ಞಾನ ಇದರಿಂದ ತಿಳಿದುಬರುತ್ತದೆ. ಇನ್ನು ವೇದೋಪನಿಷತ್ತುಗಳ ಗ್ರಂಥವನ್ನು ಸಾಂಸ್ಕೃತಿಕ ಹಿನ್ನಲೆಯಿಂದ ಅಧ್ಯಯನವನ್ನು ಮಾಡಲು ಬಯಸುವವರಿಗೆ ಈ ಮೇಲಿನ ಗ್ರಂಥಗಳೇ ಆಕರ.

### ಸರಿಯಾದ ಅರ್ಥನಿಷ್ಕರ್ಷೆಯಲ್ಲಿರುವ ಸವಾಲುಗಳು

ವೈದಿಕ ಜನರ ನಂಬಿಕೆ, ಅವರ ಜೀವನ ಶೈಲಿ, ವೇದದಲ್ಲಿ ಚಿತ್ರಿಸಿರುವ ಪ್ರಾಕೃತಿಕ-ಭೌಗೋಳಿಕ ಸನ್ನಿವೇಶಗಳ ಅಧ್ಯಯನ ಮಾಡಲು ಬಯಸುವವರಿಗೆ ಈ ಗ್ರಂಥರಾಶಿ ಒಂದು ಅಪೂರ್ವ ಅನುಭವವನ್ನೇ ನೀಡುತ್ತದೆ. ವೇದಕಾಲದ ಸಮಾಜದ ಸೂಕ್ಷ್ಮ ವಿವರಗಳು ನಮಗೆ ಸಿಗದೆ ಹೋದರೂ ವೇದಸಾಹಿತ್ಯವನ್ನು ಪರಿಶೀಲಿಸಿದಾಗ ಸ್ವಲ್ಪ ಮಟ್ಟಿನ ಅಂದಾಜಂತೂ ಆಗುತ್ತದೆ. ವೇದದ ಕಾವ್ಯಮಯ ಶೈಲಿಯಿಂದ ಉತ್ಪ್ರೇಕ್ಷೆ-ರೂಪಕಗಳಿಂದ ವಾಸ್ತವವನ್ನು ಪ್ರತ್ಯೇಕಿಸಿ ಇದು ಹೀಗೆಯೇ ಇದ್ದಿರಬೇಕು ಎಂದು ತೀರ್ಮಾನಿಸುವುದು ಬಹಳ ಕಷ್ಟ. ಎಲ್ಲದಕ್ಕೂ ಪ್ರಾಕ್ತನ ಶಾಸ್ತ್ರದ ಆಧಾರವನ್ನು ನೀಡಲು ಸಾಧ್ಯವೇ ಇಲ್ಲ. ಆದರೂ ವಿದ್ವಾಂಸನ ಕಲ್ಪನಾಶಕ್ತಿ, ಪ್ರತಿಭೆಗಳ ಆಧಾರದ ಮೇಲೆ ವಸ್ತುಸ್ಥಿತಿಗೆ ಹತ್ತಿರ ವೆಂದೆನಿಸುವ ಕೆಲವೊಂದು ಅಂಶಗಳನ್ನು ಕಲೆಹಾಕಲಾಗಿದೆ. ವೇದದ ಸಂಸ್ಕೃತ ಭಾಷೆಯು ಅತ್ಯಂತ ಪ್ರಾಚೀನವಾಗಿದ್ದು ಅನೇಕ ವೇಳೆ ಆಧುನಿಕ ಸಂಸ್ಕೃತಭಾಷೆಯ ವ್ಯಾಕರಣ ನಿಯಮ ಗಳನ್ನು ಉಲ್ಲಂಘಿಸುವುದು ಒಂದು ದೊಡ್ಡ ಸವಾಲಾದರೆ, ಒಂದು ಶಬ್ದಕ್ಕೆ ಮೂರು ನಾಲ್ಕು ಅರ್ಥಗಳನ್ನು ಯಾಸ್ಕರೇ ನೀಡಿದ್ದು, ಭಾಷ್ಯಕಾರರೂ ಮೂರು ನಾಲ್ಕು ಅರ್ಥಗಳ ಸಾಧ್ಯತೆಯನ್ನು ಅಂಗೀಕರಿಸಿದ್ದರೆ ಅದಾಗ ಸಾಂಸ್ಕೃತಿಕ ಅಧ್ಯಯನ ಮಾಡು ವವನು ದಿಕ್ಕುಗಾಣದೆ ನಡುರಸ್ತೆಯಲ್ಲೇ ನಿಲ್ಲಬೇಕಾಗುತ್ತದೆ!

### ಕುಟುಂಬ ವ್ಯವಸ್ಥೆ ಮತ್ತು ಸ್ತ್ರೀಯರ ಸ್ಥಾನ

ವೇದಕಾಲೀನ ಸಮಾಜ ಪಿತೃಪ್ರಧಾನ ವ್ಯವಸ್ಥೆಯಾಗಿತ್ತು. ಅದೊಂದು ಅಜ್ಜ, ಅಪ್ಪ, ಮಕ್ಕಳು ಅಣ್ಣ-ತಮ್ಮಂದಿರು, ಅವರ ಮಕ್ಕಳು, ಮತ್ತು ಅವರೆಲ್ಲರ ಪತ್ನಿಯರಿಂದ ಕೂಡಿದ ಅವಿಭಾಜ್ಯ ಕುಟುಂಬವಾಗಿತ್ತು. ತಂದೆಯೇ ಕುಟುಂಬದ ಆಸ್ತಿಯ ಒಡೆಯ ನಾಗಿದ್ದು, ಆತ ತನಗೆ ಬೇಕಾದವರಿಗೆ ಆಸ್ತಿ ವಿಭಾಗ ಮಾಡಿ ಕೊಡ ಬಹುದಿತ್ತು. ಆದರೆ ಸಾಮಾನ್ಯವಾಗಿ ಆಸ್ತಿಯು ಸರಿಸಮ ವಾಗಿಯೇ ವಿಭಾಗವಾಗುತ್ತಿತ್ತು. ಮಕ್ಕಳ ವಿದ್ಯಾಭ್ಯಾಸದ ಹೊಣೆ

ಗಾರಿಕೆ ಸಂಪೂರ್ಣವಾಗಿ ತಂದೆಯ ಮೇಲಿತ್ತು. ಆತನು ಅವರಿಗೆ ವೇದಾಭ್ಯಾಸ ಹಾಗೂ ಕುಲಕಸುಬಿನಲ್ಲಿ ಶಿಕ್ಷಣ ಕೊಡಿಸುತ್ತಿದ್ದನು. ಒಂದು ಕಾಲದಲ್ಲಿ ಹೆಣ್ಣು ಮಕ್ಕಳನ್ನೂ ಗಂಡು ಮಕ್ಕಳಂತೆ ಬ್ರಹ್ಮ ಚರ್ಯ ಸಂಸ್ಕಾರವನ್ನು ನೀಡಿ ವೇದಾಭ್ಯಾಸದಲ್ಲಿ ತೊಡಗಿಸು ತ್ತಿದ್ದರು. ಅಥರ್ವವೇದದಲ್ಲಿ ಕನ್ಯೆಯರು ಬ್ರಹ್ಮಚರ್ಯವನ್ನು ಪಾಲಿಸಬೇಕು ಎಂದು ಹೇಳುವ ಸೂಕ್ತವೇ ಇದೆ. ಲೋಪಾಮುದ್ರಾ, ಘೋಷಾ, ಗಾರ್ಗೀ, ಸಿಕತಾ ನೀವಾವರೀ, ಅಂಭೃಣನ ಮಗ ಳಾದ ವಾಕ್ ಮೊದಲಾದ ಮಹಿಳೆಯರು ವೇದದ ಋಷಿಗಳಾಗಿ ದ್ದರು. ಬೃಹದಾರಣ್ಯಕೋಪನಿಷತ್ತಿನ ಕೊನೆಯ ಅಧ್ಯಾಯದಲ್ಲಿ (೬.೪.೧೭) ಪಂಡಿತೆಯಾದ ಮಗಳು ಹುಟ್ಟಬೇಕಾದರೆ ದಂಪತಿ ಗಳು ಮಾಡಬೇಕಾದ ಕರ್ಮಗಳನ್ನು ಹೇಳಲಾಗಿದೆ. ಪಾಣಿನಿಯ ಸೂತ್ರ (**ಪತ್ಯುರ್ನೋಯಜ್ಞಸಂಯೋಗೇ**- ೪.೧.೩೩) ದಂತೆ ಪತ್ನೀ ಎಂಬ ಶಬ್ದವ್ಯುತ್ಪತ್ತಿಯೇ ಹೇಳುವಂತೆ ಪತಿ ಹಾಗೂ ಪತ್ನೀ ಇಬ್ಬರಿಗೂ ಒಟ್ಟಿಗೆ ಯಜ್ಞಯಾಗಾದಿ ಕಾರ್ಯದಲ್ಲಿ ಅಧಿಕಾರ ವಿರುತ್ತದೆ. ಯಜ್ಞಗಳಲ್ಲಿ ಪತ್ನೀ ಮಾಡುವ ಕಾರ್ಯವೂ ಅನೇಕ ವುಂಟು. ಋಗ್ವೇದದ ೮.೯೧.೧ ರಲ್ಲಿ ಅಪಾಲಾ ಎಂಬ ಸ್ತ್ರೀಯು ಸೋಮಲತೆಯನ್ನು ಹಿಂಡಿ ಅದರ ರಸವನ್ನು ತಾನೇ ಇಂದ್ರನಿಗೆ ಅರ್ಪಿಸಿದ್ದರ ಉಲ್ಲೇಖ ಬರುತ್ತದೆ.

''ಹೇ ವಧುವೇ! ನಿನ್ನ ಮಾವನಲ್ಲಿ ಆನಂದದಾಯಕಳಾದ ರಾಣಿಯಂತೆ ವರ್ತಿಸು. ಅತ್ತೆಯಲ್ಲಿಯೂ ಸಂತೋಷಜನಕಳಾದ ರಾಣಿಯಂತೆ ವರ್ತಿಸು. ನಾದಿನಿಯರಲ್ಲಿ ಉತ್ತಮವಾದ ರಾಣಿ ಯಂತೆ ವರ್ತಿಸು. ಮೈದುನರಲ್ಲಿಯೂ ಸಂತೋಷಜನಕವಾದ ಅಧಿಕಾರವನ್ನು ನಡೆಸು'' *(ಋಗ್ವೇದ, ೧೦.೮೫.೪೬)* — ಈ ಮಂತ್ರವು ಸೊಸೆಯಾಗಿ ಹೋಗಲಿರುವ ಸ್ತ್ರೀ ಗಂಡನ ಮನೆಗೆ ಯಜಮಾನಿಯಂತೆ ಎಂದು ಹೇಳುತ್ತದೆ. ಸ್ತ್ರೀಯು ತನ್ನ ಮದು ವೆಯ ಸಮಯದಲ್ಲಿ ತನ್ನ ಪಾಲಿಗೆ ಬಂದ ಆಸ್ತಿ, ಉಡುಗೊರೆ ಗಳಿಗೆ (ಪಾರಿಣಾಯ್ಯಾ) ತಾನೇ ಒಡತಿಯಾಗಿದ್ದಳು. ಇದೇ ಸ್ತ್ರೀ ಧನ. ವೇದಕಾಲದಲ್ಲಿ ಪರ್ದಾ-ಪದ್ಧತಿಯು ಸ್ತ್ರೀಯರಿಗೆ ಇದ್ದಂತೆ ಕಂಡುಬರುವುದಿಲ್ಲ, ಬಾಲ್ಯವಿವಾಹದ ಉಲ್ಲೇಖ ವೇದಗಳಲ್ಲಿ ಸಿಗುವುದಿಲ್ಲ, ವೇದಗಳಲ್ಲಿ ವಿವಾಹ ವಿಚ್ಛೇದನದ ಸುಳಿವೇ ಸಿಗದು. ಏಕವಿವಾಹವೇ ಆಚರಣೆಯಲ್ಲಿದ್ದರೂ ಬಹುವಿವಾಹಕ್ಕೆ ಅನುಮತಿಯಿತ್ತು. ರಾಜರು, ಸ್ಥಿತಿವಂತರು ಮಾತ್ರ ಬಹು ವಿವಾಹ ವಾಗುತ್ತಿದ್ದರು. ಸ್ತ್ರೀಯರು ತಮ್ಮ ಪತಿಯರೊಂದಿಗಾಗಲಿ, ಪ್ರೇಮಿ ಯರೊಂದಿಗಾಗಲಿ ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸಬಹು ದಿತ್ತು. ಅವರು ಸಾರ್ವಜನಿಕ ಸಭೆಗಳಲ್ಲಿ ವಾದಿಸುತ್ತಿದ್ದರು. ಮೌಲ್ಯಯುತವಾದ ಶಿಕ್ಷಣಪದ್ಧತಿಯ ಕುರುಹು ಇದು. ಮನು ಷ್ಯನಿಗೆ ಶಿಕ್ಷಣದಲ್ಲಿ ಬಲವಾದ ಮೌಲ್ಯದ, ನೀತಿಯ ಕೊರತೆ ಯುಂಟಾದಾಗಲೇ ಸಾಮಾಜಿಕ ನಿರ್ಬಂಧದ ಆವಶ್ಯಕತೆಯಿರು ತ್ತದೆ. ಸ್ತ್ರೀಯರೂ ತಮ್ಮ ಪತಿಯರೊಂದಿಗೆ ಯುದ್ಧದಲ್ಲಿ ಭಾಗ ವಹಿಸುತ್ತಿದ್ದುದು ಕೆಲವೊಮ್ಮೆ ಕಂಡುಬರುತ್ತದೆ. ಋಗ್ವೇದ *(೧.೧೧೬.೧೫)* ದಲ್ಲಿ ಖೇಲನೆಂಬ ರಾಜನ ಪತ್ನಿಯಾದ ವಿಶ್ಪಲಾಳು ಯುದ್ಧದಲ್ಲಿ ಕಾಲನ್ನು ಕಳೆದುಕೊಂಡಾಗ ಅಶ್ವಿನೀ ದೇವತೆಗಳು ಅವಳಿಗೆ ಕಬ್ಬಿಣದ ಕಾಲನ್ನು ಜೋಡಿಸಿದರು ಎಂಬ ಉಲ್ಲೇಖವಿದೆ. ಕಳ್ಳರಿಂದ ಅಪಹರಿಸಲ್ಪಟ್ಟ ತನ್ನ ಹಸುಗಳನ್ನು ಮುದ್ಗಲ ಋಷಿಯು ಅವರೊಂದಿಗೆ ಯುದ್ಧ ಮಾಡಿ ಹಿಂಪಡೆಯಬೇಕಾದರೆ, ಆತನ ಪತ್ನಿಯೇ ಸಾರಥಿಯಾಗಿ, ಅವನ ಜಯಕ್ಕೆ ಕಾರಣಳಾದಳು ಎಂದು ಋಗ್ವೇದ, *(೧೦.೧೦೨.೨)* ದಲ್ಲಿ ಬರುತ್ತದೆ.

### ಸಾಮಾಜಿಕ ವ್ಯವಸ್ಥೆ

ಸಮಾಜವು ವರ್ಣವ್ಯವಸ್ಥೆಯಿಂದ ಕೂಡಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತ ಒಂದು ಸುಸ್ಥಿರವಾದ ಸಮಾಜವನ್ನು ನಿರ್ಮಿಸು ವುದರಲ್ಲಿ ತಮ್ಮ ಬದುಕಿನ ಸಾರ್ಥಕತೆಯನ್ನು ಕಾಣುತ್ತಿದ್ದರು. ತಮ್ಮ ತಮ್ಮ ವರ್ಣಧರ್ಮಗಳನ್ನು ಯಜ್ಞದಂತೆ ಆಚರಿಸು ತ್ತಿದ್ದರು. ನಂತರದ ಕಾಲದಲ್ಲಿದ್ದಂತೆ ಜಾತಿಪದ್ಧತಿಯಾಗಲಿ, ಸಂಕು ಚಿತತೆಯಾಗಲಿ, ಒಂದು ವರ್ಣದವರು ಇನ್ನೊಂದು ವರ್ಣ ದವರ ಕರ್ಮವನ್ನು ಮಾಡಲೇಬಾರದೆಂಬ ನಿಯಮವಿರ ಲಿಲ್ಲ. ಒಬ್ಬ ವ್ಯಕ್ತಿಯ ಗುಣ, ಯೋಗ್ಯತೆಗಳು ಮುಖ್ಯವಾಗಿತ್ತು. ಶತ ಪಥ ಬ್ರಾಹ್ಮಣದಲ್ಲಿ *(೧೦.೪.೧.೧೦)* ಶ್ಯಾಪರ್ಣ ಸಾಯ ಕಾಯನನ ಪುತ್ರರಲ್ಲಿ ಕೆಲವು ಬ್ರಾಹ್ಮಣರಾದರು, ಕೆಲವರು ಕ್ಷತ್ರಿಯರಾದರು, ಕೆಲವರು ವೈಶ್ಯರಾದರೆಂದು ಉಲ್ಲೇಖವಿದೆ. ಐತರೇಯ ಬ್ರಾಹ್ಮಣದ ಪ್ರವರ್ತಕನಾದ ಋಷಿ ಮಹೀದಾಸನು ತನ್ನ ತಂದೆಗೆ 'ಇತರಾ' ಎಂಬ ಶೂದ್ರ ಪತ್ನಿಯಲ್ಲಿ ಹುಟ್ಟಿದ ಪುತ್ರ ನಾಗಿದ್ದು ವಿದ್ಯಾವಂತ, ಬುದ್ಧಿವಂತನಲ್ಲದ್ದರಿಂದ ತನ್ನ ತಂದೆ ಯಿಂದ ಅಸಡ್ಡೆಗೊಳಗಾದನು. ಇತರೆಯ ಮಗನಾದ್ದರಿಂದ ಅವನನ್ನು ಐತರೇಯನೆಂದು ಜನ ಕರೆಯುತ್ತಿದ್ದರು. ಇತರೆಯು ಗಂಡನು ತನ್ನ ಮಗನನ್ನು ಅಸಡ್ಡೆ ಮಾಡುತ್ತಿದ್ದುದಕ್ಕೆ ಕಾರಣ ವನ್ನರಿತು ತನ್ನ ಕುಲದೇವತೆಯಾದ ಭೂಮಿದೇವಿಯನ್ನು (ಮಹೀ) ಪ್ರಾರ್ಥಿಸಿದಳು. ಅದರ ಪರಿಣಾಮವಾಗಿ ಈಕೆಯ ಮಗನು ಸಕಲವಿದ್ಯಾಪಾರಂಗತನಾದನು. ಮಹಿಯ ಅನುಗ್ರಹ ದಿಂದ ವಿದ್ಯೆಯನ್ನು ಕಲಿತದ್ದರಿಂದ ಈತನು ಮಹೀದಾಸನೆಂಬ ಖ್ಯಾತಿಯನ್ನು ಹೊಂದಿದನು. ಋಷಿ ಕವಶ ಐಲೂಷನೂ ದಾಸಿಯ ಮಗನಾಗಿದ್ದನು. ವಿಶ್ವಾಮಿತ್ರನು ಮೊದಲು ಕ್ಷತ್ರಿಯನಾಗಿದ್ದು ಋಷಿತ್ವವನ್ನು ಪಡೆದು ನಂತರ ಬ್ರಾಹ್ಮಣ್ಯವನ್ನೂ ಗಳಿಸಿದನು. ಆದರೆ ಇಂತಹ ನಿದರ್ಶನಗಳು ಅಪವಾದಗಳೆನ್ನಬಹುದು. ಧರ್ಮಸೂತ್ರಗಳಲ್ಲಿ ಪ್ರತಿಯೊಂದು ವರ್ಣದವರ ಕರ್ತವ್ಯವನ್ನು ವಿಧಿಸಲಾಗಿದೆ. ವೇದಾಧ್ಯಯನ, ಯಜ್ಞ, ದಾನ, ವೇದ ಪ್ರವ ಚನ, ಯಜ್ಞಗಳನ್ನು ಮಾಡಿಸುವುದು ಹಾಗೂ ದಾನವನ್ನು ಸ್ವೀಕರಿ ಸುವುದು — ಇವು ಬ್ರಾಹ್ಮಣನ ಕರ್ತವ್ಯವಾಗಿದ್ದವು. ವೇದಾ ಧ್ಯಯನ, ಯಜ್ಞ, ದಾನ, ಎಲ್ಲ ಭೂತಗಳನ್ನು ರಕ್ಷಿಸುವುದು, ದುಷ್ಟರನ್ನು ಶಿಕ್ಷಿಸುವುದು, ರಾಜ್ಯಭಾರ — ಇವು ಕ್ಷತ್ರಿಯನ

ಕರ್ತವ್ಯವಾಗಿದ್ದವು, ವೇದಾಧ್ಯಯನ, ಯಜ್ಞ, ದಾನ, ಕೃಷಿ, ವಾಣಿಜ್ಯ, ಪಶುಪಾಲನೆ ಹಾಗೂ ಬಡ್ಡಿಯಿಂದ ಜೀವನ (ಕುಸೀದ) — ಇವೇ ವೈಶ್ಯನ ಕರ್ತವ್ಯಗಳು. ಇತರ ಮೂರು ವರ್ಣದವರ ಸೇವೆ, ಶಿಲ್ಪವೃತ್ತಿ(ಮರಗೆಲಸ, ಕಬ್ಬಿಣದ ಕೆಲಸ ಇತ್ಯಾದಿ), ಕಾರು ವೃತ್ತಿ (ಅಗಸವೃತ್ತಿ, ಕ್ಷೌರಿಕವೃತ್ತಿ ಇತ್ಯಾದಿ) — ಇವು ಶೂದ್ರನ ಕರ್ತವ್ಯಗಳಾಗಿದ್ದವು. ಆರ್ಯಜನಾಂಗವಲ್ಲದೆ ದಸ್ಯುಗಳೆಂದು ಕರೆಯಲ್ಪಡುವ ವೇದಬಾಹಿರ ಜನರೊಂದಿಗೆ ನಡೆದ ಅನೇಕ ಯುದ್ಧಗಳನ್ನು ವೇದಗಳಲ್ಲಿ ವರ್ಣಿಸಲಾಗಿವೆ. ದಸ್ಯುಗಳನ್ನು ಕೊಲ್ಲೆಂದೂ, ಅವರ ಮೇಲೆ ವಿಜಯ ಸಾಧಿಸಿಕೊಡೆಂದೂ ಇಂದ್ರಾದಿ ದೇವತೆಗಳನ್ನು ಪ್ರಾರ್ಥಿಸುವುದನ್ನು ಕಾಣುತ್ತೇವೆ. ಕಾಲಕ್ರಮೇಣ ಈ ವೈರವೆಂಬುದು ಮಾಯವಾಗಿ ನೆರೆಯ ರಾಜನ ಮೇಲೆ ದಾಳಿ ಮಾಡಲು ರಾಜರು ದಸ್ಯುಗಳ ಜೊತೆಗೆ ಸಂಧಿ ಮಾಡಿಕೊಂಡು ಅವರೊಂದಿಗೆ ಅನೇಕ ಯುದ್ಧಗಳಲ್ಲಿ ವಿಜಯ ಸಾಧಿಸುವುದು ಕಂಡುಬರುತ್ತದೆ. ಅವರೊಂದಿಗೆ ವಿವಾಹವೇ ಮೊದಲಾದ ಸಂಬಂಧವನ್ನು ಬೆಳಸಿಕೊಂಡು ಕ್ರಮೇಣ ತಮ್ಮ ಸಮಾಜದಲ್ಲಿ ಅವರನ್ನೂ ಸೇರಿಸಿಕೊಳ್ಳುವುದನ್ನು ಗುರುತಿಸಬಹುದು.

ಮೃತಶರೀರಗಳನ್ನು ಕೆಲವರು ಹೂಳುತ್ತಿದ್ದರು, ಕೆಲವರು ಸುಡುತ್ತಿದ್ದರು ಅಥವಾ ಹೀಗೆಯೇ ಕಾಡಿನಲ್ಲಿಯೋ, ಏಕಾಂತ ಸ್ಥಳಗಳಲ್ಲಿ ಪಶು-ಪಕ್ಷಿಗಳಿಗೆ ಬಿಡುತ್ತಿದ್ದರು ಎಂದು ಅಥರ್ವವೇದ *(೧೮.೨.೩೪)* ದಲ್ಲಿ ಉಲ್ಲೇಖವಾಗಿದೆ.

### ಶಿಕ್ಷಣ

ವೇದಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರಿಗೆ ಗುರುಕುಲದಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿತ್ತು. ವಿದ್ಯೆಯನ್ನು ಮಾರುವುದು ಪಾಪವೆಂದು ಪರಿಗಣಿಸಲ್ಪಡುತ್ತಿತ್ತು. ವಿದ್ಯಾರ್ಥಿಗಳು ಅಲ್ಲಿ ಆತ್ಮಸಂಯಮ, ಬ್ರಹ್ಮಚರ್ಯ, ಶಿಸ್ತಿನಿಂದಿದ್ದು ತನ್ನ ಸ್ವಶಾಖಾ ವೇದವನ್ನು ಅಧ್ಯಯನ ಮಾಡುತ್ತಿದ್ದರು. ಎಂದಿನಿಂದ ಶೂದ್ರರನ್ನು, ಆರ್ಯಸಮಾಜಕ್ಕೆ ಸೇರದವರನ್ನು ವೇದ ಜ್ಞಾನದಿಂದ ಹೊರಗೆ ಮಾಡಲಾಯಿತೆಂದು ಹೇಳಲಾಗದು. ಏಕೆಂದರೆ, ಯಜುರ್ವೇದಸಂಹಿತೆಯು *(೨೬.೫)* ಕಲ್ಯಾಣಕರವಾದವೇದವನ್ನು ಎಲ್ಲರಿಗೂ ಹೇಳಿಕೊಡಬೇಕೆಂದು ಹೇಳುತ್ತದೆ; (**ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ । ಬ್ರಾಹ್ಮಣರಾಜನ್ಯಾಭ್ಯಾಂ ಶೂದ್ರಾಯ ಚಾರ್ಯಾಯ ಚ ಸ್ವಾಯ ಚಾರಣಾಯ॥**) ಋಗ್ವೇದದ ಒಂದೆಡೆ (ಜನಾ ಯದಗ್ನಿಮ್ ಅಯಜಂತ ಪಂಚ, ೧೦.೪೫.೬) ಅಗ್ನಿಗೆ ಐವರು ಅಗ್ನಿಗೆ ಆಹುತಿಗಳನ್ನು ನೀಡಿದರು ಎಂದಿದೆ. ಯಾಸ್ಕರ ಮತದಂತೆ ನಾಲ್ಕು ವರ್ಣದ ಜನರು ಮತ್ತು ನಿಷಾದರೇ (ವೇದ ಬಾಹಿರ ವರ್ಗ) ಈ ಐವರು. ಅದೇ ಋಗ್ವೇದದ ಇನ್ನೊಂದೆಡೆಯಲ್ಲಿ (‘**ಅಗ್ನಿಋಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ**’, ೯.೬೬.೨೦) ಎಂದು ಅಗ್ನಿಯು ಎಲ್ಲ ಐದು ಜನರಿಗೆ ಪುರೋಹಿತನು ಎಂದು ಹೇಳಿದೆ. ಮೊದಲು ಈ ಎಲ್ಲರಿಗೂ ವೇದದ ಅಧ್ಯಯನದಲ್ಲಿ ಅವಕಾಶವಿದ್ದು, ನಂತರ ಮೂರು ವರ್ಣದವರಿಗೆ ಸಂಪೂರ್ಣವೇದಾಧ್ಯಯನವೂ, ತ್ರೈವರ್ಣಿಕರ ಸ್ತ್ರೀಯರಿಗೆ, ಸ್ಥಪತಿ-ನಿಷಾದರಿಗೆ ಅವರ ಕರ್ಮಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಅಧ್ಯಯನ ಮಾಡಿಸುವ ಪದ್ಧತಿ ಜಾರಿಗೆ ಬಂದಿರಬಹುದು. ವಿದ್ಯಾರ್ಥಿಯ ಸಾಮಾಜಿಕ ಸ್ಥಿತಿಗತಿಗಿಂತಲೂ ಆತನ ಚಾರಿತ್ರ್ಯಕ್ಕೆ ಮಹತ್ವ ನೀಡಲಾಗುತ್ತಿತ್ತು. ವಿದ್ಯೆಯನ್ನು ಗಳಿಸಲು ಗುರುಕುಲಕ್ಕೆ ಬಂದ ಸತ್ಯಕಾಮನೆಂಬ ಹುಡುಗನನ್ನು ಗುರುವು ಅವನ ಪರಿಚಯ ಕೇಳುತ್ತ ಅವನ ತಂದೆ ಯಾರೆಂದು ಕೇಳಿದಾಗ ತನಗೆ ಗೊತ್ತಿಲ್ಲವೆಂದೂ, ತನ್ನ ತಾಯಿಯನ್ನು ಕೇಳಿಬರುತ್ತೇನೆಂದು ಹೇಳಿ ಮನೆಗೆ ಬಂದನು. ತನ್ನ ತಾಯಿಯನ್ನು ಪ್ರಶ್ನಿಸಿದಾಗ ಆಕೆ ತನಗೂ ಆತನ ತಂದೆ ಯಾರೆಂದು ತಿಳಿದಿಲ್ಲವೆಂದೂ, ತನ್ನ ಹೆಸರು ಜಬಲಾ ಎಂದೂ, ಮಗನ ಹೆಸರು ಸತ್ಯಕಾಮ ಜಾಬಾಲಾ ಎಂದೂ ಹೇಳಿದಳು. ತಾಯಿಯ ಮಾತಿನಂತೆ ಸತ್ಯ ಕಾಮನು ಗುರುವಿಗೆ ಮುಚ್ಚುಮರೆಯಿಲ್ಲದೆ ತಿಳಿಸಿದಾಗ, ಗುರುವು ಸತ್ಯಸಂಧನಾದ ಆತನ ಚಾರಿತ್ರ್ಯವನ್ನು ಗುರುತಿಸಿ ತನ್ನ ವಿದ್ಯಾರ್ಥಿಯನ್ನಾಗಿ ಮಾಡಿಕೊಂಡನು. ವಿದೇಹ (ಮಿಥಿಲಾ), ಕುರು ಹಾಗೂ ಪಾಂಚಾಲದ ವಿದ್ವಾಂಸರನ್ನು ಬಹಳ ಹೊಗಳಿರುವುದರಿಂದ ಅವು ಬಹು ವಿದ್ವಾಂಸರಿಂದ ಕೂಡಿದ ಸ್ಥಳವೆಂದೂ ಕಲಿಕೆಯ ಸ್ಥಾನವೆಂದೂ ಊಹಿಸಬಹುದು. ಇದಲ್ಲದೆ ವಿದ್ಯೆಗಾಗಿ ಒಂದು ಕಡೆಯಿಂದ ಇನ್ನೊಂದೆಡೆಗೆ, ಒಬ್ಬ ಆಚಾರ್ಯನಿಂದ ಇನ್ನೊಬ್ಬನೆಡೆಗೆ ಹೋಗುತ್ತಿದ್ದರು ಎಂದು ತಿಳಿದುಬರುತ್ತದೆ. ಬ್ರಾಹ್ಮಣರೂ ತಮಗೆ ಗೊತ್ತಿಲ್ಲದ ವಿದ್ಯೆಗಳನ್ನು ಕ್ಷತ್ರಿಯರಿಂದ ಕಲಿತುಕೊಳ್ಳುತ್ತಿದ್ದರು ಎಂಬುದಕ್ಕೆ ಉಪನಿಷತ್ತುಗಳಲ್ಲಿ ಅನೇಕ ಆಧಾರಗಳಿವೆ.

ವಿದ್ಯಾರ್ಥಿಯು ಅನೇಕ ವಿಷಯಗಳನ್ನು ಕಲಿಯಬಹುದಿತ್ತು. ಛಾಂದೋಗ್ಯೋಪನಿಷತ್ತಿನಲ್ಲಿ ನಾರದನು ಸನತ್ಕುಮಾರನಿಗೆ ತಾನು ಕಲಿತ ವಿದ್ಯೆಯ ಪಟ್ಟಿಯನ್ನು ಕೊಡುತ್ತಾನೆ: ನಾಲ್ಕು ವೇದಗಳ ಜೊತೆಗೆ ಇತಿಹಾಸ, ಪುರಾಣ, ವ್ಯಾಕರಣ, ಪಿತೃಗಳಿಗೆ ಸಂಬಂಧಿಸಿದ ವಿದ್ಯೆ, ಗಣಿತ, ಪ್ರಾಕೃತಿಕ ವಿಕೋಪಗಳಿಗೆ ಸಂಬಂಧಿಸಿದ ವಿದ್ಯೆ, ಖನಿಜವಿದ್ಯೆ, ತರ್ಕ, ನೀತಿಶಾಸ್ತ್ರ, ಶಬ್ದವ್ಯುತ್ಪತ್ತಿ ಶಾಸ್ತ್ರ, ಭೌತಶಾಸ್ತ್ರ, ಯುದ್ಧಕಲೆ, ಖಗೋಳಶಾಸ್ತ್ರ, ಸರ್ಪವಿದ್ಯೆ, ಅರವತ್ತ ನಾಲ್ಕು ವಿದ್ಯೆಗಳು (ದೇವಜನ ವಿದ್ಯೆ). ಜೀವನ ನಡೆಸಲು ಬೇಕಾದ ಕಸುಬಿನ ಶಿಕ್ಷಣವನ್ನು ಪ್ರತಿಯೊಬ್ಬನೂ ತನ್ನ ತಂದೆಯಿಂದಲೇ ಪಡೆದುಕೊಳ್ಳುತ್ತಿದ್ದನು. ಧನುರ್ವೇದ, ಆಯುರ್ವೇದ, ಗಂಧರ್ವವಿದ್ಯೆಗಳು ಉಪವೇದಗಳಾಗಿ ಅಧ್ಯಯನ ಮಾಡಲ್ಪಡುತ್ತಿದ್ದವು. ಆಯುರ್ವೇದದಲ್ಲಿ ವೃಕ್ಷಾಯುರ್ವೇದ, ಹಸ್ತ್ಯಾಯುರ್ವೇದ, ವಿಷವಿದ್ಯೆಗಳು ಗುರುವಿನಿಂದ ಶಿಷ್ಯನಿಗೆ ಹಸ್ತಾಂತರವಾಗುತ್ತಿತ್ತು.

### ಆಹಾರ ಪದ್ಧತಿ

ಆಹಾರವಾಗಿ ಬತ್ತ, ಯವ, ಉದ್ದು, ಅಕ್ಕಿ, ಸಾಮೆ, ಅಶ್ರು

ಬೀಜ, ಕಾಡು ಬಗೆಯ ಅಕ್ಕಿ, ಬರಗು ಅಕ್ಕಿ, ಸಾಸಿವೆ, ಗೋಧಿ, ಉದ್ದು, ಹೆಸರು, ಕಡಲೆ, ಹಾಲು ಹಾಗೂ ಹಾಲಿನ ಪದಾರ್ಥಗಳು, ಕರಂಭ (ಹೊಟ್ಟು ತೆಗೆದ ಧಾನ್ಯ, ಅಥವಾ ಎಳ್ಳು ಅಥವಾ ಜವೆಗೋಧಿಯನ್ನು ಹುರಿದು ಪುಡಿಮಾಡಿ ಕಲಸಿದ ಗಂಜಿಯಂಥ ಪದಾರ್ಥ), ಹಾಲಿನಲ್ಲಿ ಅನ್ನ ಮತ್ತು ಹುರುಳಿಕಾಯಿ ಬೇಯಿಸಿ ತಯಾರಿಸಿದ ಖಾದ್ಯ, ಅಪೂಪ (ಅಕ್ಕಿ ಅಥವಾ ಬಾರ್ಲಿಗೆ ತುಪ್ಪ ಹಾಕಿ ಮಾಡಿದ ಒಂದು ಖಾದ್ಯ), ಮಾಂಸ (ಎತ್ತು, ಬಂಜೆಯಾದ ಹಸು, ಕುರಿ, ಆಡು), ಜೇನು — ಇವುಗಳನ್ನು ಬಳಸುತ್ತಿದ್ದರು ಎಂದು ತಿಳಿದುಬರುತ್ತದೆ. (ಆಹಾರದಲ್ಲಿ ಎತ್ತು ಹಾಗೂ ಹಸುಗಳ ಬಳಕೆಯ ಹೆಚ್ಚುವರಿ ಓದಿಗೆ ಪಿ.ವಿ.ಕಾಣೆಯವರ The History of Dharmashastras – ಭಾಗ-೨, ಪುಟ ೭೭೨-೭೭೩ ನೋಡುವುದು; ಬೃಹದಾರಣ್ಯಕೋಪನಿಷತ್ತಿನ ೬.೪.೧೮ ನ್ನು ನೋಡುವುದು.) ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಅನೇಕ ಬಗೆಯ ಮದ್ಯಗಳನ್ನೂ ಸೇವಿಸುತ್ತಿದ್ದರು.

### ದೇವತೆಗಳು-ಒಂದೇ ಸತ್ಯದ ಹಲವು ಅಭಿವ್ಯಕ್ತಿಗಳು

ವೇದದಲ್ಲಿರುವ ಒಟ್ಟು ದೇವತೆಗಳು ೩೩ ಎಂದು ಬೃಹದಾರಣ್ಯಕದಲ್ಲಿದೆ. ಎಂಟು ವಸುಗಳು, ಹನ್ನೊಂದು ರುದ್ರರು, ಹನ್ನೆರಡು ಆದಿತ್ಯರು, ದ್ಯುಃ ಮತ್ತು ಪೃಥಿವೀ — ಇವೇ ಆ ೩೩ ದೇವತೆಗಳು. ಋಗ್ವೇದದ ಋಷಿಯು ದ್ಯಾವಾ-ಪೃಥಿವೀಗಳ ತತ್ತ್ವವನ್ನು ಕುರಿತು ಧ್ಯಾನ ಮಾಡಿದಾಗ ಅವನಿಗೆ ಅನಂತದ ದರ್ಶನವಾಯಿತು. ಅವನು ಅದನ್ನು ಅದಿತಿ ಎಂದು ಕರೆದನು. ಅದೇ ಅದಿತಿ ನಂತರ ಆದಿತ್ಯರೆಂಬ ದೇವತೆಗಳ ತಾಯಿಯೆನಿಸಿಕೊಂಡಳು. ಆದಿತ್ಯನು ದ್ಯುಲೋಕದ ದೇವತೆ, ಇಂದ್ರ ಅಥವಾ ವಾಯು ಅಂತರಿಕ್ಷದ ದೇವತೆ ಹಾಗೂ ಅಗ್ನಿಯು ಪೃಥಿವಿಗೆ ದೇವತೆಯು. ಈ ಮೂರು ದೇವತೆಗಳೇ ಮೂವತ್ತಮೂರು ದೇವತೆಗಳಾಗುತ್ತಾರೆ. ಪುನಃ ಈ ಮೂವತ್ತ ಮೂರು ದೇವತೆಗಳೇ ಮುನ್ನೂರ ಮೂವತ್ತೊಂಬತ್ತು ದೇವತೆಗಳಾಗುತ್ತಾರೆ. ಮುಂದೆ ಪುರಾಣಗಳಲ್ಲಿ ಈ ಸಂಖ್ಯೆಯೇ ಮೂವತ್ತ ಮೂರು ಕೋಟಿಯವರೆಗೂ ಬಂದು ನಿಲ್ಲುತ್ತದೆ. ಆ ಮೂರು ದೇವತೆಗಳ ಮಹಿಮೆಯೇ ಈ ಮೂವತ್ತಮೂರು ಕೋಟಿ ದೇವತೆಗಳು. ಋಗ್ವೇದದಲ್ಲಿ ಬರುವ ಕೆಲವು ದೇವತೆಗಳ ಹೆಸರು ಹೀಗಿವೆ — ಆದಿತ್ಯ, ಮಿತ್ರ, ವಿಷ್ಣು, ಇಂದ್ರ, ವರುಣ, ಭಗ, ಅರ್ಯಮಾ, ಗರುಡ, ಸವಿತೃ, ವಾಯು, ಮರುತ್ತುಗಳು, ಪರ್ಜನ್ಯ, ಯಮ, ವಿಶ್ವೇದೇವತೆಗಳು, ಅಶ್ವಿನಿ ದೇವತೆಗಳು, ಉಷಃ, ಋಭುಗಳು, ರುದ್ರ, ಅಗ್ನಿ. ಇವೇ ಅಲ್ಲದೆ ಇನ್ನೂ ಅನೇಕ ಸಣ್ಣ ಸಣ್ಣ ದೇವತೆಗಳ ಉಲ್ಲೇಖ ಋಗ್ವೇದದಲ್ಲಿದೆ. ಋಗ್ವೇದದ ೧೦.೬೦ರಲ್ಲಿ ಒಬ್ಬ ರಾಜ ಅಸಮಾತಿಯನ್ನೂ ಸ್ತುತಿಸುವುದು ಕಂಡುಬರುತ್ತದೆ. ಈ ಹಲವಾರು ದೇವತೆಗಳನ್ನು ವೇದವು ಹೇಳಿದರೂ ನಿಜವಾಗಿಯೂ ಈ ಎಲ್ಲ ದೇವತೆಗಳೂ ಒಂದೇ ಸತ್ಯದ ಹಲವು ಹೆಸರುಗಳು ಅಷ್ಟೆ ಎಂಬ ತತ್ತ್ವವನ್ನು ಹೇಳಲು ಮರೆಯುವುದಿಲ್ಲ: ಇಂದ್ರಂ ಮಿತ್ರಂ ವರುಣಮಗ್ನಿ ಮಾಹು ರಥೋ ದಿವ್ಯಃ ಸ ಸುಪರ್ಣೋ ಗರು ತ್ಮಾನ್। ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತ ರಿಶ್ವಾನ ಮಾಹುಃ ॥ *(ಋಗ್ವೇದ ೧.೧೬೪.೪೬)*

ಉಪನಿಷತ್ತುಗಳಲ್ಲಿ ಆತ್ಮತತ್ತ್ವ, ಪರಮಾತ್ಮತತ್ತ್ವಗಳನ್ನು ವಿಮರ್ಶಿಸಲಾಗಿದ್ದು ಮಾನವಜೀವನದ ಗುರಿ ಆತ್ಮಸಾಕ್ಷಾತ್ಕಾರ, ಪರಮಾತ್ಮ ಸಾಕ್ಷಾತ್ಕಾರವೆಂದು ಪ್ರತಿಪಾದಿಸಲಾಗಿದೆ. ಸಂಸಾರದ ನಿಸ್ಸಾರತೆಯನ್ನು ಬೋಧಿಸಿ, ಸಂಸಾರದ ಕಾರಣವಾದ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡರೆ ಅವಿದ್ಯೆಯು ನಾಶವಾಗಿ ಮೋಕ್ಷ ಲಾಭವಾಗುತ್ತದೆ ಎಂದು ಬೋಧಿಸುತ್ತದೆ.

### ಆರ್ಥಿಕ ವ್ಯವಸ್ಥೆ

ವೇದಕಾಲವು ಕೃಷಿಪ್ರಧಾನವಾಗಿತ್ತು. ಮಳೆಯನ್ನಾಧರಿಸಿ ಬೇಸಾಯವನ್ನು ಮಾಡುತ್ತಿದ್ದರೂ ಕೃಷಿಗೆ ಬೇಕಾದ ನೀರಾವರಿ ವ್ಯವಸ್ಥೆಗಳು ಚೆನ್ನಾಗಿಯೇ ಇದ್ದವು. ಮಳೆಗಾಗಿ ಮಾಡುತ್ತಿದ್ದ 'ಕಾರೀರಿ' ಎಂಬ ಯಾಗದ ಉಲ್ಲೇಖ ವೇದಗಳಲ್ಲಿ ಸಿಗುತ್ತದೆ. ವೈಶ್ಯರು ವ್ಯಾಪಾರದ ಉದ್ದೇಶದಿಂದ ಸಮುದ್ರ ಪ್ರಯಾಣವನ್ನೂ ಮಾಡುತ್ತಿದ್ದರು ಎಂಬುದಕ್ಕೆ ಕೆಲವು ಪ್ರಮಾಣಗಳು ಸಿಗುತ್ತವೆ. ಸಮುದ್ರ ಪ್ರಯಾಣವನ್ನು ಬ್ರಾಹ್ಮಣರಿಗೆ ನಿಷೇಧಿಸಲಾಗಿತ್ತು. ವಸ್ತು ವಿನಿಮಯದಿಂದ ವಾಣಿಜ್ಯ ವ್ಯವಹಾರಗಳು ನಡೆಯುತ್ತಿದ್ದರೂ, ಅಲ್ಲಲ್ಲಿ 'ನಿಷ್ಕ'ವೆಂಬ ಚಿನ್ನದ ನಾಣ್ಯಗಳೂ ಬಳಕೆಯಲ್ಲಿದ್ದವು. ಪಶುಸಂಪತ್ತು ಗೋಸಂಪತ್ತು, ಅಶ್ವಸಂಪತ್ತು ಯಾರಲ್ಲಿ ಹೇರಳವಾಗಿವೆಯೋ ಅವರನ್ನು ಧನವಂತರೆಂದು ಹೊಗಳಲಾಗುತ್ತಿತ್ತು. ರಾಜನು ಕರವಸೂಲಿ ಮಾಡುವುದರೊಂದಿಗೆ ರಾಜ್ಯದ ಕೋಶವನ್ನು ತುಂಬುತ್ತಿದ್ದನು. ಯುದ್ಧಗಳಲ್ಲಿ ಗೆದ್ದ ನೆರೆರಾಜ್ಯಗಳ ಸಂಪತ್ತೂ ಒಂದು ಆಯವಾಗಿತ್ತು. ವ್ಯಾಪಾರದಲ್ಲಿ ಚೌಕಾಶಿ ಮಾಡುವುದು, ಪೂರ್ವಭಾವಿ ಒಪ್ಪಂದ (forward contract) ಮಾಡಿಕೊಳ್ಳುವುದೂ ಇದ್ದವೆಂದು ತಿಳಿದುಬರುತ್ತದೆ. ಅಥರ್ವವೇದದ ೩ನೆಯ ಕಾಂಡದ ೧೫ನೆಯ ಸೂಕ್ತದಲ್ಲಿ ಒಬ್ಬ ವ್ಯಾಪಾರಿಯು ತನ್ನ ಸರಕುಗಳು ಚೆನ್ನಾಗಿ ಮಾರಾಟವಾಗಿ ಅಧಿಕ ಲಾಭ ಸಂಪಾದಿಸಲು, ವ್ಯಾಪಾರಕ್ಕೆ ಹೊರಡುವ ಮೊದಲು ಆ ಸರಕುಗಳಿಗೆ ಅಭಿಮಂತ್ರಣ ಮಾಡಲು 'ಇಂದ್ರಮಹಂ ವಣಿಜಂ ಚೋದಯಾಮಿ' ಎಂದು ಆರಂಭವಾಗುವ ಸೂಕ್ತವನ್ನು ಬಳಸುತ್ತಿದ್ದನು. ಹತ್ತಿಯ, ಉಣ್ಣೆಯ, ಆಡು-ಕುರಿಗಳ ಲೋಮದಿಂದ ತಯಾರಿಸಿದ ಹಾಗೂ ರೇಷ್ಮೆಯ ಬಟ್ಟೆಗಳು ಮಾರಾಟದಲ್ಲಿದ್ದವು. ಅನೇಕ ಕಡೆಗಳಲ್ಲಿ ಕೋಟೆಗಳಿಂದ ರಕ್ಷಿಸಲ್ಪಟ್ಟ ನಗರಗಳನ್ನು ಉಲ್ಲೇಖಿಸಲಾಗಿದೆ. ಆದರೆ ಮುಖ್ಯವಾಗಿ ಜನರು ಹಳ್ಳಿಜೀವನ ಮಾಡುತ್ತಿದ್ದು ರಕ್ಷಣೆಗಾಗಿ ಒಟ್ಟೊಟ್ಟಿಗೆ ಮನೆಗಳನ್ನು ಕಟ್ಟಿಕೊಂಡು ಅವುಗಳಲ್ಲಿ ವಾಸಿಸುತ್ತಿದ್ದರು. ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ರತ್ನಗಳು, ಮುತ್ತು,

ತವರ, ಕಬ್ಬಿಣ, ಬಿದಿರು, ಚರ್ಮಗಳು ದೈನಂದಿನ ಜೀವನದಲ್ಲಿ ಬಳಕೆಯಲ್ಲಿದ್ದವು. ಜನರು ರಥಗಳನ್ನು, ಗಾಡಿಗಳನ್ನು ಪ್ರಯಾಣಕ್ಕೆ ಬಳಸುತ್ತಿದ್ದರು. ಎತ್ತುಗಳು, ಹೇಸರಗತ್ತೆಗಳು, ಕುದುರೆಗಳು ಗಾಡಿಗಳನ್ನು ಎಳೆಯುತ್ತಿದ್ದವು.

### ಧಾರ್ಮಿಕ ಜೀವನ

ನಾಲ್ಕು ಪುರುಷಾರ್ಥಗಳಲ್ಲಿ, ವೇದಕಾಲದ ಜನ ಕೇವಲ ಧರ್ಮ-ಮೋಕ್ಷಗಳನ್ನಷ್ಟೆ ಸೇವಿಸುತ್ತಿದ್ದರು ಅಥವಾ ಅದಕ್ಕಷ್ಟೆ ಪ್ರಾಮುಖ್ಯ ನೀಡಿದ್ದರು ಎಂಬ ನಂಬಿಕೆ ಆಧಾರರಹಿತವಾದದ್ದು. ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಜೀವನದ ವಿವಿಧ ಹಂತಗಳಲ್ಲಿ ಸೇವಿಸಲು ಆಶ್ರಮವ್ಯವಸ್ಥೆಯನ್ನೂ ಕಲ್ಪಿಸಿದ್ದರು. ಧರ್ಮದಿಂದ ಅರ್ಥ-ಕಾಮಗಳನ್ನು ಸೇವಿಸಿದರೆ ದಾರಿ ತಪ್ಪದೆಂದು ನಿಶ್ಚಯಿಸಿದ ವೈದಿಕರು, ಧರ್ಮವನ್ನು ಅರಿತುಕೊಳ್ಳಲು ವೇದಾಧ್ಯಯನ ಮಾಡಬೇಕೆಂದರಿತು ಜೀವನದ ಮೊದಲ ಹಂತವನ್ನು ಬ್ರಹ್ಮಚರ್ಯಾಶ್ರಮದಲ್ಲಿ ಕಳೆಯಬೇಕೆಂದು ವಿಧಿಸಿದರು. ಈ ಜೀವನದಲ್ಲಿ ಮೋಜಿಗೆ, ಕಾಲಕ್ಷೇಪಕ್ಕೆ ಅವಕಾಶ ನೀಡದೆ ಇಂದ್ರಿಯ ನಿಗ್ರಹ, ನೈತಿಕತೆ, ಶಿಸ್ತುಗಳನ್ನು ಆಚರಿಸುತ್ತ ಧರ್ಮದ ಮರ್ಮವನ್ನು ಅಧ್ಯಯನ ಮಾಡುತ್ತಾನೆ. ನಂತರ ವೈವಾಹಿಕ ಜೀವನವನ್ನು ಪ್ರವೇಶಿಸಿ, ಧರ್ಮಮಾರ್ಗದಿಂದ ಅರ್ಥಸಂಪಾದನೆ ಮಾಡುತ್ತಾನೆ. ಧರ್ಮವಿರುದ್ಧವಲ್ಲದ ಕಾಮವನ್ನು ಅನುಭವಿಸುತ್ತ ಒಂದು ವೇಳೆ ವೈರಾಗ್ಯವುದಿಸಿದರೆ, ತನ್ನ ಮಗನಿಗೆ ಮನೆತನದ ಜವಾಬ್ದಾರಿಯನ್ನು ವಹಿಸಿ ಸಪತ್ನೀಕನೋ, ಒಂಟಿಯೋ ಆಗಿ ವಾನಪ್ರಸ್ಥಾಶ್ರಮಕ್ಕೆ ಪ್ರವೇಶಿಸುತ್ತಾನೆ. ಹಾಗೆ ಹೋಗುವ ಮೊದಲು ಆತ ಋಷಿಋಣ, ಪಿತೃಋಣ ಮತ್ತು ದೇವಋಣಗಳನ್ನು ತೀರಿಸಬೇಕಾಗುತ್ತದೆ. ಅರಣ್ಯದಲ್ಲಿ ತಪಸ್ವಿ ಜೀವನ ನಡೆಸುತ್ತಲೇ ಪ್ರಾಣಬಿಡುತ್ತಾನೆ. ಅದರಲ್ಲಿ ಎಲ್ಲೋ ಕೆಲವರು ಆತ್ಮಜ್ಞಾನವನ್ನು ಪಡೆದು ಸಂನ್ಯಾಸವನ್ನು ಸ್ವೀಕರಿಸುತ್ತಿದ್ದರು. ಮೊದಲ ಎರಡು ಆಶ್ರಮಗಳು ಪ್ರವೃತ್ತಿಧರ್ಮವನ್ನೂ, ಕೊನೆಯ ಎರಡು ಆಶ್ರಮಗಳು ನಿವೃತ್ತಿಧರ್ಮವನ್ನೂ ಆಚರಿಸಲು ಅನುಕೂಲಕರವಾಗಿದ್ದವು.

### ರಾಜಕೀಯ ವ್ಯವಸ್ಥೆ

ವೈದಿಕ ಕಾಲದಲ್ಲಿ ಅನೇಕ ಯುದ್ಧಗಳಾಗುತ್ತಿದ್ದು ತಮ್ಮ ತಮ್ಮ ಜನರನ್ನು ಒಟ್ಟಾಗಿಸಿ ಶತ್ರುಗಳಿಂದ ರಕ್ಷಿಸಲು ಮುಖಂಡರ ಆವಶ್ಯಕತೆಯೊದಗಿ ಬಂತೆಂದೂ ಅದರ ಫಲವಾಗಿ ಕುಲಪತಿ, ಗಣಪತಿ, ವಿಶ್ಪತಿಗಳು ಜನ್ಮ ತಳೆದರು. ದೇವತೆಗಳು ಪದೇ ಪದೇ ಯುದ್ಧದಲ್ಲಿ ಅಸುರರಿಂದ ಸೋತು ಹೋಗುತ್ತಿದ್ದುದಕ್ಕೆ ಕಾರಣವನ್ನು ಹುಡುಕುತ್ತ, 'ರಾಜನಿಲ್ಲದ್ದಕ್ಕಾಗಿ ಹೀಗೆ ಸೋಲನ್ನನುಭವಿಸಬೇಕಾಗಿದೆ. ರಾಜನನ್ನು ನೇಮಿಸೋಣ' (ಅರಾಜನ್ಯತಯಾ ವೈ ನೋ ಜಯಂತಿ ರಾಜಾನಂ ಕರವಾವಹೈ ಇತಿ) ಎಂದು ಇಂದ್ರನನ್ನು ತಮ್ಮ ರಾಜನನ್ನಾಗಿ ಆಯ್ಕೆ ಮಾಡಿದರು. ಐತರೇಯ ಬ್ರಾಹ್ಮಣದಲ್ಲಿ ಬರುವ ಈ ಮೇಲಿನ ವಾಕ್ಯವೇ ವೈದಿಕರು ತಮ್ಮಲ್ಲಿ ನಾಯಕನನ್ನು ಆಯ್ಕೆ ಮಾಡಲು ಕಾರಣವೆಂಬ ಸೂಚನೆ ಸಿಗುತ್ತದೆ. ಕೆಲವೊಮ್ಮೆ ಕುಲದ ಹಿರಿಯನೇ ಅವಿರೋಧವಾಗಿ ರಾಜನಾಗಿ ಬರುತ್ತಿದ್ದ. ಇನ್ನು ಕೆಲವೊಮ್ಮೆ ಸೈನಿಕರೇ ರಾಜನನ್ನು ನೇಮಿಸುತ್ತಿದ್ದರು. ಇನ್ನೊಮ್ಮೆ ಜನರೂ ತಮ್ಮ ರಾಜನನ್ನು ಆಯ್ಕೆ ಮಾಡುತ್ತಿದ್ದರು ಎಂಬುದಕ್ಕೆ ಪುರಾವೆಗಳು ಸಿಗುತ್ತವೆ. ಆದರೆ ಸಾಮಾನ್ಯವಾಗಿ ರಾಜನು ವಂಶಪಾರಂಪರ್ಯವಾಗಿಯೇ ಅಭಿಷಿಕ್ತನಾಗುತ್ತಿದ್ದನು. ರಾಜನ ಸಾಮರ್ಥ್ಯಕ್ಕನುಸಾರವಾಗಿ ಅವನ ಒಡೆತನಕ್ಕನುಸಾರವಾಗಿ ಅವನಿಗೆ ರಾಜಾ, ಮಹಾರಾಜಾ, ಸ್ವರಾಟ್, ಭೋಜ, ಸಮ್ರಾಟ್‌ಎಂಬ ಬಿರುದುಗಳಿದ್ದವು. ರಾಜನನ್ನು ದೇವತೆಯ ಸ್ಥಾನದಲ್ಲಿಟ್ಟಿತ್ತು ವೇದ. ರಾಷ್ಟ್ರ, ಸಭಾ, ಸಮಿತಿ, ಗ್ರಾಮಣೀ, ಸೇನಾನೀ ಶಬ್ದಗಳು ಬಳಕೆಯಲ್ಲಿದ್ದವು. ಗೂಢಚಾರರ ಬಳಕೆಯೂ ಇತ್ತೆಂದು ತಿಳಿದುಬರುತ್ತದೆ.

### ಭೌಗೋಳಿಕ ಸನ್ನಿವೇಶ

ವೇದಗಳಲ್ಲಿ ಹೆಸರಿಸಿದ ನದಿಗಳಿಂದ ಆ ಕಾಲದ ಜನರ ವಾಸ್ತವ್ಯವನ್ನು ಊಹಿಸಬಹುದು. ಋಗ್ವೇದದಲ್ಲಿ ಹೆಸರಿದ ಬಹುಮುಖ್ಯ ನದಿಗಳೆಂದರೆ ಪಂಜಾಬಿನ (ಐದು ನದಿಗಳ) ಪಶ್ಚಿಮಕ್ಕಿರುವ ಸಿಂಧೂ ನದಿ, ಪಂಜಾಬಿನ ಪೂರ್ವಕ್ಕಿರುವ ಸರಸ್ವತೀ ನದಿ, ಪೂರ್ವದ ತುತ್ತ ತುದಿಗೆ ಹೆಸರಿಸಿದ ನದಿಗಳೆಂದರೆ ಗಂಗಾ ಮತ್ತು ಯಮುನಾ. ಋಗ್ವೇದದಲ್ಲಿ ಅತಿ ಹೆಚ್ಚು ಬಾರಿ ಬರುವ ಹೆಸರೇ ಸರಸ್ವತಿಯದ್ದು. ವೇದಕಾಲೀನ ಜನರ ವಸಾಹತುಗಳನ್ನು ಗಮನಿಸಿದರೆ ಅವರು ಪೂರ್ವದಿಕ್ಕಿನಿಂದ ಪಶ್ಚಿಮ ದಿಕ್ಕಿನೆಡೆಗೆ ವಿಸ್ತರಿಸುತ್ತ ಬಂದರು ಎಂದು ತಿಳಿಯುತ್ತದೆ. ಹಾಗಾಗಿ ಪಾಶ್ಚಾತ್ತ್ಯರ 'ಆರ್ಯರ ವಲಸೆ'ಯ ಸಿದ್ಧಾಂತ ತಲೆಕೆಳಗಾಗಿ ಬಿಡುತ್ತದೆ. ಆಫ್ಘಾನಿಸ್ತಾನ, ಪಾಕಿಸ್ತಾನ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ಬಿಹಾರ್ — ಈ ಪ್ರಾಂತ್ಯಗಳನ್ನು ಸೂಚಿಸಲಾಗಿದೆ. ಆನೆ, ಒಂಟೆ, ಹುಲಿ, ಸಿಂಹ, ಮಹಿಷ, ಗೌರ್ (Indian Bison), ನವಿಲು, ಪೃಷತೀ (ಚುಕ್ಕೆಯುಳ್ಳ ಜಿಂಕೆ) ಋಗ್ವೇದದಲ್ಲಿ ಹೆಸರಿಸಲ್ಪಟ್ಟಿವೆ.

### ಉಪಸಂಹಾರ

ಯಾವುದೇ ಬಾಹ್ಯ ಸಂಸ್ಕೃತಿಯು ಉಲ್ಕೆಯಂತೆ ವೇದ ಸಂಸ್ಕೃತಿಗೆ ಡಿಕ್ಕಿ ಹೊಡೆದರೂ ಅದನ್ನು ತನ್ನೊಳಗೆ ಸೆಳೆದುಕೊಂಡು ಅದರ ಭಿನ್ನ ಅಸ್ತಿತ್ವವನ್ನೇ ನಾಶ ಮಾಡಿಬಿಡುವ ಅದ್ಭುತ ಸಾಮರ್ಥ್ಯವನ್ನು ಈ ವೇದಸಂಸ್ಕೃತಿಯಲ್ಲಿ ಕಾಣಬಹುದು. ಕಾಲಕ್ಕೆ ತಕ್ಕಂತೆ ತನ್ನನ್ನು ಬದಲಿಸಿಕೊಂಡು ಎಂದಿಗೂ ಹಳಸದ, ಅತ್ಯಂತ ಪುರಾತನವಾದರೂ ಆಧುನಿಕವಾಗಿಯೇ ಕಾಣಿಸಿಕೊಳ್ಳುವ ವೇದಸಂಸ್ಕೃತಿಯು, ಎಲ್ಲ ಸಂಸ್ಕೃತಿಗಳಿಗೆ ಮಾದರಿ